ಸಿ.ಆರ್.ಎಂ.ಸಿ. **111/2020**
ಪಿ.ಡಬ್ಲ್ಯೂ.**1**

# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಯವರ ನ್ಯಾಯಾಲಯ, ವಿರಾಜಪೇಟೆ

**ಸಾಕ್ಷಿಯನ್ನು ದಿನಾಂಕಃ 04.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ಶ್ರೀ ಎನ್.ಹೆಚ್.ಎಫ್ ವಕೀಲರಿಂದ**

1. ನಾನು ಮೈಸೂರಿನಲ್ಲಿ ಎಂ.ಬಿ.ಎ. ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ದಿಃ14.07.2020 ರಂದು ಇ-ಮೇಲ್ ಮುಖಾಂತರ ನನ್ನ ಗಂಡನಿಗೆ ಸಂದೇಶವನ್ನು ಕಳುಹಿಸಿದ್ದೇನೆ ಎಂದರೆ ಇಲ್ಲ. 2020 ರಂದು ನನಗೆ ಇ-ಮೇಲ್ ಖಾತೆ ಇತ್ತು. nasirasaleem240@gmail.com ಎಂದು ನನಗೆ ಇ-ಮೇಲ್ ಐಡಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನಗೆ ಐಡಿ ಇತ್ತು. ಆದರೆ ಯಾವ ಅಕೌಂಟ್ ಇತ್ತು ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಇ-ಮೇಲ್ ಅಡ್ರೆಸ್ ಇತ್ತು. ಆದರೆ ಅದರ ಐಡಿ ನನಗೆ ಗೊತ್ತಿಲ್ಲ. ನಾನು ಎದುರುದಾರರಿಗೆ ಇ-ಮೇಲ್ ಮುಖಾಂತರ ಸಂದೇಶ ಕಳುಹಿಸುತ್ತಿರಲಿಲ್ಲ.

2. ನನ್ನ ತಂದೆ-ತಾಯಿ ಕೊಟ್ಟಿರುವ ಒಡವೆ ಎಲ್ಲಿಂದ ಬಂತು ಎಂದರೆ ಸಾಕ್ಷಿಯು ಎಂ.ಎಸ್. ಗೋಲ್ಡ್ ಮತ್ತು ವಿರಾಜಪೇಟೆ ಜ್ಯುಯಲರಿ ಅಂಗಡಿಯಿಂದ ಖರೀದಿ ಮಾಡಿರುತ್ತಾರೆ. ಅದೇ ರೀತಿ ಕೆಲವೊಂದು ಬಂಗಾರದ ವಸ್ತುಗಳನ್ನು ನನ್ನ ಅಮ್ಮನ ತಮ್ಮಂದಿರು ಉಡುಗರೆ ಮುಖಾಂತರ ನೀಡಿರುತ್ತಾರೆ. ನನ್ನ ಮದುವೆ ಆಗುವ 2 ರಿಂದ 3 ದಿನ ಮೊದಲು ಮುಂಚಿತವಾಗಿ ಬಂಗಾರವನ್ನು ಖರೀದಿ ಮಾಡಿದ್ದರು. ಎಂ.ಎಸ್. ಗೋಲ್ಡ್ ಅಂಗಡಿಯವರು ನನಗೆ ಬಿಲ್ ಅನ್ನು ನೀಡಿದ್ದರು. ಸದರಿ ಬಿಲ್ ಅನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ಈ ರೀತಿ ಯಾವುದೇ ಉಡುಗರೆ ಯನ್ನು ನನ್ನ ತಂದೆ-ತಾಯಿ ಮತ್ತು ತಾಯಿಯ ತಮ್ಮಂದಿರು ನೀಡಿಲ್ಲ ಎಂದರೆ ಸರಿಯಲ್ಲ.

3. ನನ್ನ ಗಂಡ ಕಿರುಕೂಳ ನೀಡುತ್ತಿರುವ ಬಗ್ಗೆ ಸದರಿಯವರ ಸಂಬಂಧಿಕರಿಗೆ ತಿಳಿಸಿದ್ದೇನೆ. ಸದರಿ ನನ್ನ ಕುಟುಂಬದವರಿಗೂ ಸಹ ಗೊತ್ತಿದೆ. ನನ್ನ ಗಂಡ ಕಿರುಕೂಳ ನೀಡುತ್ತಿದ್ದ ಬಗ್ಗೆ ನಾನು ನನ್ನ ಗಂಡನ ತಾಯಿ, ಅವರ ತಂಗಿ, ಅವರ ತಮ್ಮಂದಿರಿಗೆ ಸದರಿ ವಿಚಾರವನ್ನು ತಿಳಿಸಿರುತ್ತೇನೆ. ಅವರುಗಳ ಹೆಸರು ಎಂದರೆ ಜಮೀಲಾ, ಹುಸೇನ್, ಬಶೀರ್ ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ. ಈ ಬಗ್ಗೆ ನನ್ನ ಅರ್ಜಿಯಲ್ಲಿ ಬರೆದಿಲ್ಲ. ನನ್ನ ಪರವಾಗಿ ನಾನು ನನ್ನ ತಂದೆ-ತಾಯಿ, ಭಾವ ಮತ್ತು ಫಾಜಿಲ್ ರವರ ಸಾಕ್ಷಿ ಮಾಡಲು ಇಚ್ಚಿಸುತ್ತೇನೆ. ನನ್ನ ಭಾವರವರ ಹೆಸರು ಮಜೀದ್, ಸದರಿಯವರು ಎಮ್ಮೆಮಾಡು ಗ್ರಾಮದಲ್ಲಿ ವಾಸವಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

ಸಹಿ/-
(ಪ್ರದೀಪ ಪೋತದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ವಿರಾಜಪೇಟೆ.